## ಪ್ರೀತಿಯ...

ಹೇಗಿದ್ದೀಯಾ ಎಂದು ಕೇಳಲಾರೆ. ನಾನಿಲ್ಲಿ ಕ್ಷೇಮ ಎಂದೂ ಖಂಡಿತ ಹೇಳಲಾರೆ. ನಿನ್ನ ಮುಖ ನೋಡದ, ನಿನ್ನ ಧ್ವನಿ ಕೇಳದ, ನಿನ್ನ ನಗುವಿನ ಬೆಳಕನ್ನು ನನ್ನ ಕಣ್ಣೊಳಗಿಂದ ಎದೆಗೆ ಇಳಿಸಿಕೊಳ್ಳದ ದಿನ ಕ್ಷೇಮವಾಗಿರಲು ಹೇಗೆ ಸಾಧ್ಯ ಹೇಳು?

ವಿಶಾಲ ಸಾಗರದ ನಡುವೆ ದಿಕ್ಕುತಪ್ಪಿಸಿಕೊಂಡ ಮೀನುಗಾರನಂತಾಗಿದ್ದೇನೆ ನಾನು. ಸುತ್ತಮುತ್ತಲೆಲ್ಲ ನೀರೇ ನೀರು... ಆ ನೀರ ಕೆಳಗೆ ಎಣಿಸಲಾರದಷ್ಟು ಮೀನುಗಳು... ಹುಡುಕಿದರೆ ಮುತ್ತುಗಳೂ ಸಿಗಬಹುದು! ಆದರೆ ದಿಕ್ಕುತಪ್ಪಿಸಿಕೊಂಡು ಬಾಯಾರಿಕೆಯಿಂದ ಕಂಗಾಲಾಗಿರುವ ನನ್ನನ್ನು ಉಳಿಸಲು ಈ ಉಪ್ಪುನೀರಿಗೆ ಸಾಧ್ಯವೇ ಹೇಳು? ದಿಗ್‌ದಿಗಂತವೆಲ್ಲ ನೀರೇ ಆವರಿಸಿರುವಲ್ಲಿ ಎಂಥ ಅಮೂಲ್ಯ ಮುತ್ತು ಸಿಕ್ಕರೂ ಏನು ಮಾಡಲಾದೀತು ಹೇಳು. ಇಲ್ಲಿ ಕಲ್ಲೂ ಒಂದೇ ಅಮೂಲ್ಯ ಮುತ್ತೂ ಒಂದೇ.

ನಿನ್ನ ಸನಿಹವೆಂಬ ದಡವು ದಕ್ಕದ ಹೊರತು, ನಿನ್ನ ಸ್ಪರ್ಶದ ಅಮೃತಪಾನ ದೊರಕದ ಹೊರತು ಈ ಜಗದ ಎಲ್ಲವೂ ವ್ಯರ್ಥ. ನಿನ್ನ ಸನ್ನಿಧಿಯಿದ್ದರಷ್ಟೇ ನನ್ನೆಲ್ಲ ನಿಲುವು–ಗೆಲುವುಗಳಿಗೆ ಸಾರ್ಥಕ ಅರ್ಥ. ಇದು ನಿನಗೆ ಅರ್ಥವಾಗುವುದು ಯಾವಾಗ? ನನ್ನೊಳಗೂ ಹೊರಗೂ ತುಂಬಿಕೊಂಡು ದಾಹ ಹೆಚ್ಚಿಸುತ್ತಿರುವ ಉಪ್ಪುನೀರಿನಿಂದ ತಪ್ಪಿಸಿಕೊಂಡು ನಿನ್ನ ಮುಖವನ್ನು ಬೊಗಸೆಯಲ್ಲಿ ಬಾಚಿ ಕಣ್ಣ ಕೊಳದ ನೀರನ್ನು ಕಣ್ಣಿನಲ್ಲೇ ಕುಡಿಯುವುದು ಯಾವಾಗ?

ಇನ್ನು ನೀನು ಹೇಗಿದ್ದೀಯಾ ಎಂದು ಕೇಳಲಾರೆ ಎಂದು ಹೇಳಿದೆ. ಅದಕ್ಕೂ ಕಾರಣವಿದೆ. ನಿನ್ನಿಂದ ದೂರಾಗಿ ಇಲ್ಲಿ ನಾನು ಅನುಭವಿಸುತ್ತಿರುವ ಸಂಕಟದ ಒಂದಂಶವಾದರೂ ನಿನ್ನ ಮನಸ್ಸನ್ನೂ ಸುಡುತ್ತಿದೆಯಲ್ಲವೇ? ಹೌದು ಎನ್ನು... ನನ್ನಿಂದ ದೂರವಿದ್ದು ನೀನೂ ನೋಯುತ್ತಿದ್ದೀಯಾ ಎಂಬ ಸಂಗತಿಯೇ ನನಗಿಲ್ಲಿ ಎಷ್ಟೋ ಸಮಾಧಾನ ಕೊಡುತ್ತದೆ.

ಜೊತೆಗೆ ಭಯವೂ ಆಗುತ್ತದೆ. ನಾನು 'ಹೇಗಿದ್ದೀಯಾ?' ಎಂದು ಕೇಳಬೇಕು. ಅದಕ್ಕೆ ನೀನು ನೊಂದು ಬೆಂದು ಉತ್ತರಿಸಬೇಕು. 'ನೀನಿಲ್ಲದ ಜಗ ಬರಿ ಬರಡು' ಎಂದು ಮನಕಲಕುವ ಹಾಗೆ ನೀನು ಹೇಳಿದರೆ ನಾನಿಲ್ಲಿ ತುಸು ನಿರಾಳತೆಯ ನಿಟ್ಟುಸಿರು ಬಿಡುತ್ತೇನೆ. ಆದರೆ 'ನಾನಿಲ್ಲಿ ಕ್ಷೇಮ' ಎಂದು ನೀನು ಉತ್ತರಿಸಿಬಿಟ್ಟರೆ? ಆ ಕಲ್ಪನೆಯೇ ನನ್ನ ಮನಸ್ಸನ್ನು ಇರಿಯುತ್ತದೆ. ನನ್ನ ಜೊತೆಯಿಲ್ಲದೆ ನೀನು ಕ್ಷೇಮವಾಗಿರಲು ಹೇಗೆ ಸಾಧ್ಯ ಹೇಳು? ಹಾಗೆ ಸಾಧ್ಯವಾಗುವುದಾದರೆ ನನ್ನ ಈ ಎಲ್ಲ ಚಡಪಡಿಕೆಗಳಿಗೆ ಯಾವ ಅರ್ಥವಿದೆ ಹೇಳು?

ನನಗೆ ಗೊತ್ತು, ನೀನು ಈ ಮಾತಿಗೆ ನಗುತ್ತಿ. 'ಪ್ರೇಮವೆಂಬುದು ಕೊಟ್ಟು ತೆಗೆದುಕೊಳ್ಳುವ ವ್ಯಾಪಾರವಲ್ಲ. ಪ್ರೀತಿಸುವುದಕ್ಕೆ ಪ್ರೀತಿಸಿಕೊಳ್ಳುವವನ ಅನುಮತಿಯ ಅಗತ್ಯವಿಲ್ಲ' ಎಂದೆಲ್ಲ ಉದ್ದುದ್ದ ಪ್ರವಚನ ಮಾಡುತ್ತಿ. ನೀನು ಪಕ್ಕ ಕೂತು, ಗಂಭೀರವಾಗಿ, ಯಾರು ಯಾರದೋ ಪದ್ಯಗಳ ಸಾಲುಗಳನ್ನು ಉಲ್ಲೇಖಿಸುತ್ತ (ಹಾಗೆ ಉಲ್ಲೇಖಿಸುವ ಎಷ್ಟೋ ಕವಿಗಳ ಹೆಸರನ್ನು ನಾನು ಕೇಳಿಯೇ ಇರುವುದಿಲ್ಲ. ಹಾಗಾಗಿ ನೀನು ಹೇಳುವ ಕವಿ ಬಹುಶಃ ಇಲ್ಲವೇ ಇಲ್ಲವೇನೋ; ಅದು ನಿನ್ನದೇ ಸಾಲುಗಳೇನೋ ಎಂದು ಎಷ್ಟೋ ಸಲ ಅನುಮಾನವೂ ಬಂದಿದೆ!) ಹೇಳುವಾಗ, ನಿನ್ನ ಮುಖ ನೋಡುತ್ತ, ಗಾಳಿಗೆ ಮೆಲುವಾಗಿ ಅಲುಗಾಡುವ ಹಣೆಯ ಮೇಲಿನ ರಿಂಗು ರಿಂಗಿನ ಕೂದಲು, ಕಣ್ಣಿನಲ್ಲಿ ಕಾಣುವ ಆರಿಹೋಗದ ಮಿಂಚು, ಕಾವ್ಯ ಎಂದಾಕ್ಷಣ ನಿನ್ನ ಮುಖದಲ್ಲಿ ಅರಳುವ ಜೀವಂತಿಕೆಗೆ ಪರವಶನಾಗಿರುವಾಗ ನಿನ್ನ ಆ ಮಾತುಗಳು ನನಗೂ ನಿಜ ಅನಿಸುವುದಿದೆ. ಆದರೆ ಈಗ, ಇಲ್ಲಿ, ನಿನ್ನಿಂದ ಇಷ್ಟು ದೂರದಲ್ಲಿ, ಉಪ್ಪುನೀರಿನ ಸಾಗರದಲ್ಲಿ ಕಳೆದುಹೋಗಿರುವ ಮೀನುಗಾರನಂತಾಗಿರುವಾಗ ಅವ್ಯಾವ ಆದರ್ಶದ ಮಾತುಗಳೂ ನಿಜ ಅನಿಸುತ್ತಿಲ್ಲ. ಎದೆಯೊಳಗೆ ನಿಗಿನಿಗಿ ಉರಿಯುತ್ತಿರುವ ಕೆಂಡಭಾವದ ನೋವಿಗೆ, ಅದು ಉಂಟುಮಾಡುತ್ತಿರುವ ಗಾಯಕ್ಕೆ ನಿನ್ನ ಸಾಮೀಪ್ಯವೊಂದೇ ಔಷಧ ಎನಿಸುತ್ತಿದೆ.

ನಾನು ಸನ್ಯಾಸಿಯಲ್ಲ, ಕವಿಯಲ್ಲ, ನಿನ್ನ ಹಾಗೆ ಪದ್ಯಪಾನಿಯೂ ಅಲ್ಲ. ಪರಮಸ್ವಾರ್ಥಿ ಪ್ರೇಮಿಯಷ್ಟೆ. ನಿನ್ನ ಕಾವ್ಯಭಾಷೆಯಲ್ಲಿಯೇ ಹೇಳಬೇಕೆಂದರೆ, ಕೊಟ್ಟದ್ದರ ದುಪ್ಪಟ್ಟು ಪಡೆಯಲೆಳೆಸುವ ಒಲವ ವ್ಯಾಪಾರಿ. 'ವಿರಹದ ಬೇಗೆಯಲ್ಲಿಯೇ ಪ್ರೇಮ ಮಾಗುವುದು' ಎನ್ನುವ ನಿನ್ನ ಮಾತು ನಿಜವೇ ಇರಬಹುದು. ಆದರೆ ಮಾಗಿದ ಮೇಲೂ ಬೇಗೆಯಲ್ಲಿಯೇ ಉಳಿದರೆ ಹೃದಯ ಕರಕಲಾಗುವುದಿಲ್ಲವೆ ಹೇಳು?

ನಿನ್ನಷ್ಟು ಚಂದಗೆ, ಹೃದಯಹಿಂಡುವ ಹಾಗೆ ಹೇಳುವುದು ನನಗೆ ಗೊತ್ತಿಲ್ಲ. ಈಗ ಆಡುತ್ತಿರುವ ಮಾತುಗಳನ್ನೂ ನಿನ್ನಿಂದಲೇ ಕಲಿತಿದ್ದು. ಆದರೆ ಒಂದು ಮಾತ್ರ ಚೆನ್ನಾಗಿ ತಿಳಿದಿದೆ. ನನ್ನ ಬದುಕಿನ ದಾರಿ ನೀನು; ಗುರಿಯೂ ನೀನೇ. ಆ ಗುರಿಯ ಎದುರು ಉಳಿದ್ಯಾವುದೂ ಮುಖ್ಯವಲ್ಲ ನನಗೆ.

ನೋಡು, ಈ ಚಳಿಗಾಲದ ರಾತ್ರಿಗಳೂ ಹೇಗೆ ಧಗಧಗಿಸುತ್ತಿವೆ. ರಾತ್ರಿಯಷ್ಟೇ ಅರಳುವ ಹೆಸರಿಲ್ಲದ ಹೂವು ಅಂಗಳದಲ್ಲಿ ತಂಗಾಳಿಗೆ ಅಲುಗಾಡುತ್ತ ಕೆಣಕುತ್ತಿದೆ. ಗೂಡು ಸೇರಿದ ಮೇಲೂ ಹಕ್ಕಿ ಎದೆಯನ್ನು ಕುಕ್ಕುವ ಹಾಗೆ ಕೂಗುತ್ತಿದೆ. ಎಂಥ ನೋವಿನ ಹಾಡು ಅದು! ನೀನು ಹೇಳುವ ಯಾವ ಕಾವ್ಯಕ್ಕೆ ಆ ಹಾಡಿನ ನೋವ ಹಿಡಿದಿಡುವ ಶಕ್ತಿ ಇದೆ ಹೇಳು? ಅಂಥದ್ದೊಂದು ಪದ್ಯವನ್ನು ಹುಡುಕಿ ತಾ. ಅಲ್ಲಿಯವರೆಗೆ ಹಕ್ಕಿಯೂ ನಾನೂ ಹೂವೂ ಹೀಗೆ ಒಬ್ಬರನ್ನೊಬ್ಬರು ಸಂತೈಸಿಕೊಂಡು, ಎದೆಯ ಅಗ್ಗಿಷ್ಟಿಕೆಯಲ್ಲಿ ನಿನ್ನ ನೆನಪಿನ ಕೆಂಡ ಉರಿಸುತ್ತ ಪ್ರತಿ ರಾತ್ರಿಯ ಚಳಿಯನ್ನು ದಿಟ್ಟವಾಗಿ ಎದುರಿಸುತ್ತ ಕಾಯುತ್ತಿರುತ್ತೇವೆ.

ಬೂದಿಯಾರುವ ಮುನ್ನ ನೀನು ಇಲ್ಲಿರಬೇಕು. ನಂತರ ಮತ್ತೆಂದೂ ನನ್ನ ತೊರೆದು ಎಲ್ಲಿಗೂ ಹೋಗಲಾರೆ ಎಂದು ಇದೇ ಅಗ್ನಿಯ ಸಾಕ್ಷಿಯಾಗಿ ಪಣತೊಡಬೇಕು. ನನ್ನ ಸುತ್ತ ಕುಣಿದು ಅಣಕಿಸುವ ಈ ಕ್ರೂರ ಚಳಿರಾತ್ರಿಯ ಎದುರು ಬೆಳತನಕ ನಿನ್ನ ಕೈಹಿಡಿದು ನಿಂತು ಸೇಡು ತೀರಿಸಿಕೊಳ್ಳಬೇಕು. ಅಷ್ಟೇ...

ಮರುಪತ್ರವನ್ನಲ್ಲ,
ನಿನ್ನನ್ನೇ ನಿರೀಕ್ಷಿಸುತ್ತಿರುವ
**ಇತಿ...,**